## ಕರ್ನಾಟಕ ವಿಧಾನ ಪರಿಷತ್

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 16 (172)**

**ಸದಸ್ಯರ ಹೆಸರು : ಶ್ರೀ ಬಸನಗೌಡ ಬಾದರ್ಲಿ (ವಿಧಾನಸಭಾ ಕ್ಷೇತ್ರ)**

**ಉತ್ತರಿಸುವ ಸಚಿವರು : ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು**

**ಉತ್ತರಿಸಬೇಕಾದ ದಿನಾಂಕ : 09-12-2025**

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಸಿಂಧನೂರು ನಗರಕ್ಕೆ ಹೊಂದಿಕೊಂಡಂತೆ ತೋಟಗಾರಿಕೆ ಇಲಾಖೆಯ ಸುಮಾರು 18-20 ಎಕರೆ ಪ್ರದೇಶವು ಸಮರ್ಪಕವಾಗಿ ಬಳಕೆಯಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಸಿಂಧನೂರು ನಗರಕ್ಕೆ ಹೊಂದಿಕೊಂಡಿರುವ ಪ್ರಸ್ತಾಪಿತ ಜಮೀನನ್ನು 1967-68ನೇ ಇಸವಿಯಲ್ಲಿ ತೋಟಗಾರಿಕೆ ಇಲಾಖೆಗೆ ಕಂದಾಯ ಇಲಾಖೆಯಿಂದ 24.11 ಎಕರೆ ಹಸ್ತಾಂತರ ಮಾಡಲಾಗಿದ್ದು, ಇದರಲ್ಲಿ 2 ಎಕರೆ ಪ್ರದೇಶವನ್ನು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಸಿಂಧನೂರು ಇವರಿಗೆ ಹಸ್ತಾಂತರಿಸಲಾಗಿದೆ. ಪ್ರಸ್ತುತ ಕ್ಷೇತ್ರದ ಒಟ್ಟು ವಿಸ್ತೀರ್ಣ 22 ಎಕರೆ 11 ಗುಂಟೆ ಇದ್ದು, ಸುಮಾರು 58 ವರ್ಷ ವಯಸ್ಸಿನ 120 ಸಪೋಟ ಮರಗಳಿರುತ್ತವೆ. ಸದರಿ ತೋಟಗಾರಿಕೆ ಕ್ಷೇತ್ರಕ್ಕೆ ನೀರಿನ ಮೂಲ ಆಧಾರವಾಗಿದ್ದ D-40 ಕಾಲುವೆಯ ಅಕ್ಕಪಕ್ಕದ ಜಮೀನುಗಳನ್ನು ನಿವೇಶನಗಳಾಗಿ ಪರಿವರ್ತಿಸಿದ್ದು, ನೀರಿನ ಕಾಲುವೆಯು ಇಲ್ಲದಂತಾಗಿರುತ್ತದೆ. ಇದರಿಂದ ತೋಟಗಾರಿಕೆ ಕ್ಷೇತ್ರದಲ್ಲಿ ಶಾಶ್ವತ ನೀರಾವರಿ ವ್ಯವಸ್ಥೆ ಇಲ್ಲದಂತಾಗಿದ್ದು, ಇಲಾಖೆವತಿಯಿಂದ ಹೊಸದಾಗಿ ಬೋರ್‌ವೆಲ್‌ಗಳನ್ನು ಕೊರೆಯಿಸಲಾಗಿದ್ದರೂ, ನೀರು ಲಭಿಸಿರುವುದಿಲ್ಲ ಹಾಗೂ ಇತರೆ ಯಾವುದೇ ನೀರಿನ ಮೂಲ ಇಲ್ಲದಿರುವುದರಿಂದಾಗಿ ಮರಗಳು ಸೊರಗುವುದು ಹೆಚ್ಚಾಗಿರುತ್ತದೆ.<br><br>ಸದರಿ ತೋಟಗಾರಿಕೆ ಕ್ಷೇತ್ರದ ಜಮೀನಿನ ಮೂಲ ಮಾಲಿಕತ್ವದ ಕುರಿತು ದಾಖಲಾದ O.S. No.81/14 ನ್ಯಾಯಾಲಯ ಪ್ರಕರಣವು ದಿನಾಂಕ:06-07-2023 ರಂದು ವಜಾ ಆಗಿರುತ್ತದೆ. ಶ್ರೀ ಎಲ್ಲೂರು ರಾಘವೇಂದ್ರು ಮತ್ತು ಇತರರು ಉಚ್ಚ ನ್ಯಾಯಾಲಯ ಕಲಬುರಗಿ ಪೀಠದಲ್ಲಿ ದಿನಾಂಕ:03-01-2020 ರಂದು WP No.203621 ಮಧ್ಯಂತರ ಅರ್ಜಿಯನ್ನು ದಾಖಲಿಸಿದ್ದು, ದಿನಾಂಕ:18.08.2025 ರಂದು ವಜಾ ಆಗಿರುತ್ತದೆ.<br><br>ಮುಂದುವರೆದು, ಸದರಿ ಜಮೀನಿನ ಸಂಬಂಧ ದಾಖಲಿಸಲಾಗಿದ್ದ, RA/49/2023 ನ್ಯಾಯಾಲಯ ಪ್ರಕರಣವು ದಿನಾಂಕ:16-10-2024 ರಂದು ವಜಾ ಆಗಿರುತ್ತದೆ.<br><br>ಶ್ರೀ ಎಲ್ಲೂರು ವೀರೇಶ್ ತಂದೆ ಮರಿಯಪ್ಪ ಶೆಟ್ಟಿ ರವರು 24.11 ಎಕರೆ ಪ್ರದೇಶದ ಮಾಲೀಕತ್ವದ ಬಗ್ಗೆ III Addl. District & Sessions Court, Raichur sitting at Sindhanur ಇಲ್ಲಿ ದಿನಾಂಕ: 12.11.2024 ರಂದು Misc/5312/2024 ರಂತೆ ಪ್ರಕರಣವನ್ನು ದಾಖಲಿಸಿದ್ದು, ಪ್ರಕರಣದ ಕುರಿತು ವಾದವನ್ನು ಆಲಿಸಲು |

| | | |
|---|---|---|
| | | ದಿನಾಂಕ:18-02-2026 ರಂದು ಪ್ರಕರಣವನ್ನು ಮುಂದೂಡಲಾಗಿರುತ್ತದೆ.<br><br>ಈ ಹಿನ್ನಲೆಯಲ್ಲಿ, ಸಿಂಧನೂರು ತೋಟಗಾರಿಕೆ ಕ್ಷೇತ್ರದಲ್ಲಿನ ವಿವಿಧ ನ್ಯಾಯಾಲಯ ಪ್ರಕರಣಗಳ ವಿಚಾರಣೆಗಳಿಂದ ಕ್ಷೇತ್ರದ ಅಭಿವೃದ್ಧಿ ಕಾರ್ಯಗಳಿಗೆ ಅಡಚಣೆಯಾಗಿರುತ್ತದೆ.<br><br>ಆದಾಗ್ಯೂ, ಸರ್ಕಾರಿ ಹಣ್ಣಿನ ತೋಟ, ಸಿಂಧನೂರಿನ ಕಾಂಪೌಂಡ್ ಗೋಡೆ ಮುಂಭಾಗದಲ್ಲಿ ಅನಧಿಕೃತವಾಗಿ ನಿರ್ಮಿಸಲಾದ 200 ಪೆಟ್ಟಿಗೆ ಅಂಗಡಿಗಳನ್ನು 2024ರಲ್ಲಿ ಜಿಲ್ಲಾಡಳಿತ ರಾಯಚೂರು ಹಾಗೂ ಪೋಲೀಸ್ ಇಲಾಖೆಗಳ ಸಹಯೋಗದೊಂದಿಗೆ ತೆರವುಗೊಳಿಸಲಾಗಿರುತ್ತದೆ.<br><br>ಜಿಲ್ಲಾಧಿಕಾರಿಗಳು, ರಾಯಚೂರು ಜಿಲ್ಲೆ ರವರು ತೆರವುಗೊಳಿಸಿದ ಜಾಗಕ್ಕೆ ಪುನಃ ಅನಧಿಕೃತ ಪ್ರವೇಶವನ್ನು ನಿರ್ಬಂಧಿಸಲು 2.0 ಮೀಟರ್ ಎತ್ತರದ ಚೈನ್ ಲಿಂಕ್ ಮೆಶ್ ಬೇಲಿಯನ್ನು ನಿರ್ಮಿಸಿ ಖಾಲಿ ಜಾಗದಲ್ಲಿ ಮರ ಜಾತಿಯ ಸಸಿಗಳನ್ನು ನೆಟ್ಟು ಪೋಷಿಸುವಂತೆ ಸೂಚಿಸಿದಂತೆ 2024-25 ನೇ ಸಾಲಿನಲ್ಲಿ ರೂ. 5.00 ಲಕ್ಷ ಅನುದಾನ ವೆಚ್ಚದಲ್ಲಿ ಚೈನ್ ಲಿಂಕ್ ಮೆಶ್ ಬೇಲಿಯನ್ನು ನಿರ್ಮಿಸಲಾಗಿರುತ್ತದೆ.<br><br>2025-26 ನೇ ಸಾಲಿನ ಇಲಾಖಾ ಯೋಜನೆಯಡಿ ಸಸ್ಯಾಭಿವೃದ್ಧಿ ಕಾರ್ಯಕ್ರಮದಡಿ 2000 ಸಂಖ್ಯೆ ಅಲಂಕಾರಿಕ ಸಸಿ ಮತ್ತು 2000 ಸಂಖ್ಯೆ ಅಲಂಕಾರಿಕ ಕುಂಡಗಳ ಉತ್ಪಾದನೆ, ಚಾಲೆಂಜ್ ಫಂಡ್ ಕಾರ್ಯಕ್ರಮದಡಿ 2.0 ಹೆಕ್ಟೇರ್ ಜೋಳ ಬೆಳೆಯಲು ಕಾರ್ಯಕ್ರಮ ರೂಪಿಸಲಾಗಿರುತ್ತದೆ. ಕ್ಷೇತ್ರ ನಿರ್ವಹಣೆ ಕಾರ್ಯಕ್ರಮದಡಿ 6.0 ಹೆಕ್ಟೇರ್ ಪ್ರದೇಶ ಸಾಧಾರಣ ಕಾಡು ಸ್ವಚ್ಚಗೊಳಿಸುವುದು ಹಾಗೂ 10 ಟನ್ ಕೊಟ್ಟಿಗೆ ಗೊಬ್ಬರ ಒದಗಿಸಲು ಗುರಿ ಹೊಂದಿದ್ದು, ಒಟ್ಟಾರೆ ರೂ 6.215 ಲಕ್ಷಗಳ ಅನುದಾನವನ್ನು ನಿಗದಿಪಡಿಸಿ, ಸದರಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಕ್ರಮ ವಹಿಸಲಾಗುತ್ತಿದೆ.<br><br>The proposed land of 24.11 acres at Sindhanur was handed over to the Horticulture Department by Revenue Department in the year 1967–68. The total area of the land is 22 acres and 11 guntas, out of this 2 acre land was handed over to APMC Sindhanur. At present, there are about 120 sapota trees that are around 58 years old. The land adjacent to the D-40 canal, which served as the main water source for the said horticulture land, have been converted into residential plots, resulting in the disappearance of the water canal. Consequently, the horticulture land no longer has a permanent irrigation system. Although the department has recently drilled a new bore well, no water has been obtained, and since there is no other source of water, the number of trees drying up has increased significantly.<br><br>The court case O.S. No. 81/14, which had been filed regarding the original ownership of the said horticulture |

| | | |
|---|---|---|
| | | land, was dismissed on 06-07-2023. Sri Elluru Raghavendra and others had filed an interim application in WP No. 203621 in the High Court, Kalaburagi Bench on 03-01-2020, and it was dismissed on 18-08-2025.<br><br>Further, the court case RA/49/2023, which had been filed in relation to the said land, was dismissed on 16-10-2024.<br><br>Sri Elluru Veeresh, son of Mariyappa Shetty, filed Misc/5312/2024 before the III Additional District & Sessions Court, Raichur, sitting at Sindhanur on 12-11-2024 on the ownership of 24.11 acre land, and the case has been adjourned to 18-02-2026 for hearing.<br><br>In background of various court cases related to the Sindhanur horticulture farm it has become an obstacle for taking development activities in the land.<br><br>However, in front of the compound wall of the Government Horticulture Garden, Sindhanur, around 200 unauthorized box shops that had been constructed were cleared in 2024 with the cooperation of the Raichur District Administration and the Police Department.<br><br>To prevent any further unauthorized encroachment on the cleared land, the Deputy Commissioner of Raichur District instructed that a 2.0-meter-high chain-link mesh fence be constructed and tree saplings be planted and maintained in the vacant area.<br><br>Accordingly, during the year 2024–25, a chain-link mesh fence was constructed at an expenditure of Rs. 5.00 lakhs.Under the Departmental Scheme for the year 2025–26, a programme has been formulated for propagation of 2000 ornamental saplings and 2000 ornamental pots. Under the Challenge Fund Programme, a plan has been prepared to cultivate 2.0 hectares of maize.<br><br>Under the programme for maintenance of farm, a target has been set to clear 6.0 hectares of forest area and to provide 10 tons of farmyard manure. A total grant of Rs.6.215 lakh has been sanctioned, and action is being taken to implement the said works. |
| (ಆ) | ಬಂದಿದ್ದಲ್ಲಿ, ಸದರಿ ಸ್ಥಳದಲ್ಲಿ ಸಿಂಧನೂರಿನ ರೈತರಿಗೆ ತೋಟಗಾರಿಕೆ ಬೆಳೆಗಳನ್ನು ಬೆಳೆಯಲು ಅನುಕೂಲವಾಗುವಂತೆ ಅಗತ್ಯ ಮಾರ್ಗದರ್ಶನ | ಪ್ರಸ್ತಾವನೆಯು ಸರ್ಕಾರದ ಮುಂದಿರುವುದಿಲ್ಲ.<br><br>The proposal is not before the Government. |

| | | |
|---|---|---|
| | ನೀಡುವ ಉದ್ದೇಶದಿಂದ ಸರ್ಕಾರವು ಕೇಂದ್ರ ಸರ್ಕಾರದ ಸಹಯೋಗದೊಂದಿಗೆ ಕೇಂದ್ರ ತೋಟಗಾರಿಕಾ ವಿಶ್ವವಿದ್ಯಾಲಯವನ್ನು ಸ್ಥಾಪಿಸಲು ಕ್ರಮ ವಹಿಸುವುದೇ; | |
| (ಇ) | ಹಾಗಿದ್ದಲ್ಲಿ, ಯಾವ ಕಾಲಮಿತಿಯೊಳಗೆ ಸಿಂಧನೂರಿನಲ್ಲಿ ಕೇಂದ್ರ ತೋಟಗಾರಿಕಾ ವಿಶ್ವವಿದ್ಯಾಲಯವನ್ನು ಸ್ಥಾಪಿಸಲು ಸರ್ಕಾರದಿಂದ ಕ್ರಮ ವಹಿಸಲಾಗುವುದು? | **ಉದ್ಭವಿಸುವುದಿಲ್ಲ.**<br>Does not arise. |

**ಸಂಖ್ಯೆ: HORTI 512 HGM 2025**

**(ಎಸ್. ಎಸ್. ಮಲ್ಲಿಕಾರ್ಜುನ್)**
**ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು**